ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.94/2020

| | | | |
|---|---|---|---|
| ಹೆಸರು | : | ಕೆ ಎನ್ ಉಮಾಶಂಕರ್ | ಸಿ .ಡಬ್ಲ್ಯೂ :19 |
| ತಂದೆ ಹೆಸರು | : | ಲೇಟ್ ಸಿ. ನಂಜಯ್ಯ | ಪಿ .ಡಬ್ಲ್ಯೂ :10 |
| ವಯಸ್ಸು | : | 53 ವರ್ಷ | |
| ಉದ್ಯೋಗ | : | ಮುಖ್ಯ ಪೇದೆ , ಚಿಕ್ಕನಾಯಕನಹಳ್ಳಿ ವೃತ್ತ ನಿರೀಕ್ಷಕರ ಕಚೇರಿ | |
| ವಾಸಸ್ಥಳ | : | ಗುಬ್ಬಿ | |

ಸಾಕ್ಷಿಯನ್ನು ದಿಃ 04-11-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

2016 ರಿಂದ 2022 ರವರೆಗೆ ಗುಬ್ಬಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ .

ದಿಃ 22-09-2019 ರಂದು ಗುಬ್ಬಿ ತಾಲ್ಲೂಕಿನ ಬಾಬು ಜಗಜೀವನ್ ರಾಮ್ ಪಾರ್ಕ್ ನಲ್ಲಿರುವ ಗಣೇಶ್ ಮೂರ್ತಿಯ ಬಂದೋಬಸ್ತಿಗೆಂದು ನನಗೆ ನೇಮಿಸಲಾಗಿತ್ತು . ನಾನು ಆ ದಿನ ಕರ್ತವ್ಯದಲ್ಲಿದ್ದಾಗ ಮಧ್ಯಾಹ್ನ 12.00 ಗಂಟೆಯಲ್ಲಿ 3 ರಿಂದ 6 ನೇ ಆರೋಪಿತರುಗಳು ಮತ್ತು 13 ಆರೋಪಿತರುಗಳು ಮತ್ತು ಇತರರು ಡಿ ಜೆ ಹಾಕಿಸಬೇಕು ಎಂದು ಒತ್ತಡ ತಂದರು . ಚಾಸಾ -23 ಮತ್ತು ASI ರವರುಗಳಾದ ವೆಂಕಟೇಶ್ ಮತ್ತು ತೋಟಾರಾಧ್ಯ ಹಾಗೂ WPC ಸೈನಾಜ್ ನದಾಫ್ ,ಮುಖ್ಯ ಪೇದೆಗಳಾದ ಬೋರಯ್ಯ ರವರು ಸ್ಥಳಕ್ಕೆ ಬಂದಿದ್ದರು . ರಸ್ತೆಯಲ್ಲಿ ಆಂಬುಲೆನ್ಸ್ ಓಡಾಡಲು ಅವಕಾಶ ನೀಡದೆ ಡಿ ಜೆ ಹಾಕಬೇಕೆಂದು ಆರೋಪಿತರುಗಳು ಎನ್ ಹೆಚ್ 206 ರ ರಸ್ತೆಯಲ್ಲಿ ಪ್ರತಿಭಟನೆ ಮಾಡುತ್ತಿದ್ದರು . ಪೊಲೀಸರಿಗೆ ಧಿಕ್ಕಾರ ಎಂದು ಕೂಗುತ್ತಿದ್ದರು , ಹಾಗೂ ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿದರು . ಮೇಲಿನ ವಿಚಾರಗಳ ಕುರಿತು ನಾನು ತನಿಖಾಧಿಕಾರಿಗಳ ಮುಂದೆ ದಿಃ 24-09-2019 ರಂದು ಹೇಳಿಕೆ ನೀಡಿದ್ದೇನೆ. ಮೇಲೆ ಹೇಳಿದಂತೆ ಆ ದಿನ ಪ್ರತಿಭಟನೆ ಮಾಡುತ್ತಿದ್ದ ಆರೋಪಿತರುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ 2 ರಿಂದ 9 ಮತ್ತು 11 ರಿಂದ 14 ನೇ ಆರೋಪಿತರುಗಳನ್ನು ನೋಡಿ ಗುರುತಿಸಿದ್ದಾರೆ .

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ಮೇಲೆ ಹೇಳಿದ ದಿನಾಂಕದಂದು ನನ್ನನ್ನು ಮೇಲೆ ಹೇಳಿದ ಕರ್ತವ್ಯಕ್ಕೆ ನೇಮಿಸಿದ್ದ ಸಂಬಂಧ ನನಗೆ ಪ್ರತ್ಯೇಕ ದಾಖಲೆ ನೀಡಿಲ್ಲ , ಠಾಣಾ ಡೈರಿಯಲ್ಲಿ ನಮೂದು ಇರುತ್ತದೆ . ಮೇಲೆ ಹೇಳಿದ ದಿನಾಂಕದಂದು ಗುಬ್ಬಿ ಪೊಲೀಸ್ ಠಾಣೆಯಲ್ಲಿ ವೆಂಕಟೇಶ್ ಎಂಬ ಪೇದೆಯನ್ನು ಹೊರತು ಪಡಿಸಿ ಉಳಿದ ಎಲ್ಲರನ್ನು ಶಿರಾದ ಗಣಪತಿ ಉತ್ಸವದ

ಬಂದೋಬಸ್ತು ಕರ್ತವ್ಯಕ್ಕೆ ನೇಮಿಸಿದ್ದರು ಎಂದರೆ ಸರಿಯಲ್ಲ. ಆರೋಪಿತರುಗಳೆಲ್ಲರೂ ಗುಬ್ಬಿಯ ತಾಲ್ಲೂಕಿನ ಬಾಬು ಜಗಜೀವನ್ ರಾಮ್ ನಗರದ ನಿವಾಸಿಗಳೆಂದರೆ ಸರಿ . ನಾನು ಹೇಳುವಂತೆ ಆರೋಪಿತರುಗಳು ಡಿ ಜೆ ಹಾಕಬೇಕೆಂದು ಯಾವುದೇ ಪ್ರತಿಭಟನೆ ಮಾಡಿಲ್ಲ ಎಂದರೆ ಸರಿಯಲ್ಲ. 2019 ನೇ ಸಾಲಿನಲ್ಲಿ ಕರೋನಾ ಖಾಯಿಲೆ ಇದ್ದ ಕಾರಣ ಯಾವುದೇ ಕಾರ್ಯಕ್ರಮಗಳನ್ನು ಮಾಡಲು ಅವಕಾಶ ಇರಲಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ದಿನದಂದು ಯಾವ ನೋಂದಣಿ ಸಂಖ್ಯೆಯ ಆಂಬುಲೆನ್ಸ್ ಬಂದಿತ್ತು ಎಂದರೆ ಸಾಕ್ಷಿಯು ನೋಂದಣಿ ಸಂಖ್ಯೆ ಗೊತ್ತಿಲ್ಲ , ವಾಹನಗಳನ್ನು ಅವರು ತಡೆದಿದ್ದರು ಎಂದು ತಿಳಿಸಿದ್ದಾರೆ . ನಾನು ಹೇಳುವಂತೆ ಆರೋಪಿತರುಗಳು ಮೇಲೆ ಹೇಳಿದ ಸ್ಥಳಕ್ಕೆ ಬಂದಿಲ್ಲ , ಪೊಲೀಸರ ವಿರುದ್ಧ ಧಿಕ್ಕಾರ ಎಂದು ಕೂಗಿಲ್ಲ , ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ , ಯಾವುದೇ ಪ್ರತಿಭಟನೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರುಗಳು ಜೆ ಡಿ ಎಸ್ ಪಕ್ಷದ ಕಾರ್ಯಕರ್ತರುಗಳಾಗಿದ್ದು 2019 ರಲ್ಲಿ ಬಿ ಜೆ ಪಿ ಪಕ್ಷದ ಆಡಳಿತವಿದ್ದ ಕಾರಣ ರಾಜಕೀಯದ ದುರುದ್ದೇಶದಿಂದ ಆರೋಪಿತರುಗಳ ವಿರುದ್ಧ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.